**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.**

ಸಿ.ಸಿ. ನಂಃ 724/2017 ಸಿಡಬ್ಲೂ: 2 ಪಿಡಬ್ಲೂ: 1

ಪ್ರಮಾಣವಚನ ಬೋಧಿಸಲಾಯಿತು ದಿಃ 18-06-2025

ಹೆಸರು : ಶರಣಬಸಪ್ಪ

ತಂದೆ ಹೆಸರು : ಸಹದೇವ

ವಯಸ್ಸು : 40 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸಸ್ಥಳ : ಮುಗಲಾ, ತಾ.ಚಿತ್ತಾಪುರ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾಸಾ 1 ನನಗೆ ಪರಿಚಯವಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನಗೆ ಗೊತ್ತಿಲ್ಲ.

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ರೀತಿಯ ಮಾಹಿತಿ ಇರುವುದಿಲ್ಲ. ಪೋಲೀಸರು ನಮ್ಮ ಸಮಕ್ಷಮ ಯಾವುದೇ ರೀತಿಯ ಪಂಚನಾಮೆಗಳು ಮಾಡಿರುವುದಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ಜಪ್ತಿ ಪಂಚನಾಮೆ ಆಗಿದ್ದು, ಸಾಕ್ಷಿಯು ಸದರಿ ದಾಖಲಾತಿ ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-1 ಎಂದು ಗುರುತಿಸಲಾಗಿದೆ ಹಾಗು ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಆದರೇ ನಿಪಿ-1 ರಲ್ಲಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ವಾಟೀಸವಾಲುಃ</u>** ಮಾನ್ಯ ಸ.ಸ.ಅ ರವರಿಂದ:

ದಿಃ11-06-2017 ರಂದು ಚಾ ಸಾ 3 ರವರ ಕೋರಿಕೆಯ ಮೇರೆಗೆ ನಾನು ಹಾಗೂ ಚಾಸಾ 1 ರವರು ಅಬಕಾರಿ ಕಛೇರಿಗೆ ಹಾಜರಾಗಿ ಅಬಕಾರಿ ಅಧಿಕಾರಿಗಳು ಕರ್ನಾಟಕ ತೆಲಂಗಾಣ ಗಡಿ ಭಾಗದಲ್ಲಿ ಮತ್ತು ತಾಂಡಾಗಳಲ್ಲಿ ಸಾಮೂಹಿಕ ಅಬಕಾರಿ ದಾಳಿ ಕೈಗೊಳ್ಳುವ ಕರ್ಯಕ್ರಮ ಇದೆ ಇದಕ್ಕೆ ಯಾವುದೇ ಅಕ್ರಮಗಳು ಕಂಡು ಬಂದರೆ ಪಂಚರಾಗಲು ಕೇಳಿಕೊಂಡಿದ ಮೇರೆಗೆ ನಾವು ಪಂಚರಾಗಲು ಒಪ್ಪಿಕೊಂಡಿದ್ದು ಎಂದರೆ ಸರಿಯಿಲ್ಲ. ಸುಮಾರು 10 ವಾಹನದಲ್ಲಿ ಅಬಕಾರಿ ತಂಡಗಳು ವೆಂಕಟಾಪುರ,

ಕಾರಬಾರಿ ತಾಂಡಾ, ಗೊಂದೋಪಲ್ಲಿ ತಾಂಡಾ, ಇಂದಿರಾನಗರ ತಾಂಡಾಗಳಲ್ಲಿ ದಾಳಿ ಮಾಡಿ ಕಂಡೇರಾಯನ ತಾಂಡಾಕ್ಕೆ ಬಂದಿದ್ದೆವು ಎಂದರೆ ಸರಿಯಿಲಲ. ಆಗ ಸಮಯ ಬೆಳಿಗ್ಗೆ 11-20 ಗಂಟೆಯಾಗಿತ್ತು ಎಂದರೆ ಸರಿಯಿಲ್ಲ, ಕಂಡೇರಾಯನಪಲ್ಲಿ ಗ್ರಾಮದಲ್ಲಿ ಉತ್ತರ ದಿಕ್ಕಿಗೆ ಮುಖಮಾಡಿರುವ ರಾಮಚಂದ್ರ ದೇವರಕೊಂಡ ಅವರ ಕಿರಾಣ ಅಂಗಡಿಗೆ ಬಂದಿದ್ದರು ಎಂದರೆ ಸರಿಯಿಲ್ಲ. ಆಗ ಸದರಿಯವರು ನಮ್ಮನ್ನು ನೋಡಿ ಹೋಡಿ ಹೇಗಲು ಪರಯತ್ನಿಸುತ್ತಿದ್ದಾಗ ಅಧಿಕಾರಿಗಳು ಆತನನ್ನು ತಡೆದು ನಿಲ್ಲಿಸಿ ಕಳಬಟ್ಟಿ ಸರಾಯಿ ಅಂಗಡಿಯಲ್ಲಿ ತಯಾರಿಸಲು ಬಳಸುವ ಬೆಲ್ಲ , ನವಸಾಗರ ಮಾರಾಟ ಮಾಡುತ್ತೀರಾ ಎಂದು ದೂರು ಬಂದಿದೆ ಅದಕ್ಕೆ ನಮ್ಮ ಅಂಗಡಿಯನ್ನು ಶೋದನೆ ಮಾಡಬೇಕು ಅಂತಾ ಹೇಳಿ ಸ್ಥಳದಲ್ಲಿಯೇ ಶೋದನಾ ಪತ್ರವನ್ನು ತಯಾರಿಸಿ ಶೋದನೆ ಮಾಡಿದಾಗ 16 ಪೆಟ್ಟಿಗೆಗಳಲ್ಲಿ ತಲಾ 19 ಕೆ ಜಿ ಯಂತೆ ಅಂದಾಜು 300 ಕೆ ಜಿ ಬೆಲ್ಲ ಇತ್ತು ಎಂದರೆ ಸರಿಯಿಲ್ಲ. ಹಾಗೆಯೇ 4 ಬ್ಯಾಗುಗಳಲ್ಲಿ ತಲಾ 25 ಕೆ ಜಿಯಂತೆ ನವಸಾಗರ, ಹಾಗೂ 2 ಸೆಣಬಿನ ಚೀಲಗಳಲ್ಲಿ 100 ಕೆ ಜಿ ಸ್ಪಟಿಕ ಇತ್ತು ಎಂದರೆ ಸರಿಯಿಲ್ಲ.

ನಂತರ ಸ್ಥಳದಲ್ಲಿ ಹಾಜರಿದ್ದ ವ್ಯಕ್ತಿಗೆ ವಿಚಾರಿಸಲಾಗಿ ಸದರಿಯವನು ತನ್ನ ಹೆಸರು ಜಯಪ್ರಕಾಶ ತಂದೆ ರಾಮಕೊಂಡ ಎಂದು ತಿಳಿಸಿದ್ದರು ಎಂದರೆ ಸರಿಯಿಲ್ಲ. ಕಳಬಟ್ಟಿ ತಯಾಗಿಸಲು ಬಳಸುವ ಸಾಮಾಗ್ರಿಗಳು ಎಲ್ಲಿಂದ ತಂದಿದ್ದು ಅಂತಾ ಕೇಳಿದಕ್ಕೆ ಹಾಗೂ ಯಾರಿಗೆ ಮಾರಾಟ ಮಾಡುವುದಾಗಿ ಎಂದು ಕೇಳಿದಾಗ ಆರೋಪಿತನು ಹೈದ್ರಾಬಾದ್ ದಿಂದ ತೆಗೆದುಕೊಂಡು ಬಂದಿದ್ದೀನಿ ಅದರಿಂದ ಕಳಬಟ್ಟಿ ತಯಾರಿಸಿ ಸುತ್ತಲಿನ ಗ್ರಾಮಗಳಿಗೆ ಹಾಗೂ ತಾಂಡಾಗಳಿಗೆ ಮಾರಾಟ ಮಾಡುತ್ತೇನೆ ಎಂದರೆ ಸರಿಯಿಲ್ಲ.ನಂತರ ಅಬಕಾರಿ ಅಧಿಕಾರಿಗಳು ಮು ಮಾ ಹಾಗೂ ಆರೋಪಿತನಿಗೆ ವಶಕ್ಕೆ ಪಡೆದುಕುಂಡಿರುತ್ತಾರೆ ಎಂದರೆ ಸರಿಯಿಲ್ಲ.ನಂತರ ಸದರಿ ಚೀಲಗಳ ಪೈಕಿ 50 ಗ್ರಾಂ ನಂತೆ 16 ಪಾಕೇಟುಗಳಲ್ಲಿರುವ ನವಸಾಗರದಿಂದ 200 ಗ್ರಾಂ ನಂತೆ 4 ಪಾಕೇಟುಗಳು ಮತ್ತು ಸ್ಪಟೀಕದಿಂದ 100 ಗ್ರಾಂ ನಂತೆ 2 ಪಾಟೇಕುಗಳನ್ನು ಪ್ಯಾಕ್ ಮಾಡಿ ಅದಕ್ಕೆ 420 ಸಂಖ್ಯೆ ನಿಂದ ಸೀಲು ಮಾಡಿ ಚೀಟಿ ಯನ್ನು ಅಂಟಿಸಿದರು ಎಂರದೆ ಸರಿಯಿಲ್ಲ. ಅದೇ ರೀತಿ ಪೋಲೀಸರು ಅವುಗಳಿಗೆ ನಮ್ಮ ಸಹಿ ಪಡೆದುಕೊಂಡಿರುತ್ತಾರೆ ಎಂರೆ ಸರಿಯಿಲ್ಲ. ಸದರಿ ಪಂಚನಾಮೆಯು ಬೆಳಿಗ್ಗೆ 11-30 ಗಂಟೆಯಿಂದ ಮದ್ಯಹ್ನ 12-30 ಗಂಟೆಯ ವರೆಗೆ ಬರೆಯಲಾಗಿದೆ ಎಂರೆ ಸರಿಯಿಲ್ಲ.

ಸಾಕ್ಷಿಗೆ 3 ಪಾಕೇಟುಗಳಲ್ಲಿ ಇರುವ ಬೆಲ್ಲ, ನವಸಾಗರ ಮತ್ತು ಸ್ಪಟಿಕ ನ್ನು ತೋರಿಸಲಾಗಿ ಸಾಕ್ಷಿಯು ಅವುಗಳನ್ನು ಗುರುತಿಸಲು ನಿರಾಕರಿಸುತ್ತಾರೆ ಆದ್ದರಿಂದಅವುಗಳನ್ನು ಮು ಮಾ 1 ರಿಂದ 3

ಎಂದು ಗುರುತಿಸುತ್ತಾರೆ. ಪಂಚನಾಮೆಯಲ್ಲಿ ಭಾಗಿಯಾಗಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ: ವಕೀಲರು ಪಾಟೀಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**